# ಟಿ. ಪಿ. ಕೈಲಾಸಂ ಅವರ ನಾಟಕಗಳಲ್ಲಿ ಸ್ತ್ರೀ ಸಂಬಂಧೀ ವಸ್ತು ಧೋರಣೆಗಳು.

**ಡಾ. ವಿನೋದ್ ರಾಜ್ ಸಿ. ಸಿ.**
ಅತಿಥಿ ಉಪನ್ಯಾಸಕ
ಕನ್ನಡ ವಿಭಾಗ
ಎಫ್.ಎಂ.ಕೆ.ಎಂ.ಸಿ. ಕಾಲೇಜು
ಮಡಿಕೇರಿ.

**Article Link: https://aksharasurya.com/2023/07/vinodraj-c-c/**

ನಾಟಕದ ವಸ್ತುವಿಗೆ ಸಂಬಂಧಿಸಿದಂತೆ ಜಗತ್ತಿನ ಎಲ್ಲಾ ದೇಶಗಳ ರಂಗಭೂಮಿಯ ಇತಿಹಾಸವು ಪುರಾಣ ವಸ್ತುವಿನಿಂದ ಆರಂಭಗೊಂಡು ಸಾಮಾಜಿಕ ವಸ್ತುವಿನ ಕಡೆಗೆ ನಡೆದು ವ್ಯವಸ್ಥಿತ ಬೆಳವಣಿಗೆ ಹೊಂದಿರುವುದು ಸ್ಪಷ್ಟವಿದೆ. ಕನ್ನಡ ರಂಗಭೂಮಿಯ ಇತಿಹಾಸದ ಸಂದರ್ಭದಲ್ಲಿಯೂ ಪೌರಾಣಿಕ ವಸ್ತು ಸ್ಥಿತಿ, ಜೀವನ ಶ್ರದ್ಧೆಗಳನ್ನು ಜಾನಪದ ರಂಗಭೂಮಿಯ ಕಾಲದಿಂದಲೇ ಗುರುತಿಸಬಹುದು. ನಮ್ಮ ಅಭಿಜಾತ ಪರಂಪರೆಯ ಮೊದಲ ನಾಟಕಕಾರರು ಸಂಸ್ಕೃತ ನಾಟಕ ಪರಂಪರೆಯನ್ನು ಅನುಕರಿಸಿದ್ದರಿಂದ ಸಹಜವಾಗಿಯೇ ಅವರೂ ಸಂಸ್ಕೃತ ನಾಟಕದ ಮೂಲ ದ್ರವ್ಯವಾದ ಪುರಾಣವನ್ನೇ ಅವಲಂಬಿಸಿದ್ದಾರೆ. ಹತ್ತೊಂಬತ್ತನೆಯ ಶತಮಾನದಲ್ಲಿ ಭಾರತವು ವೈಜ್ಞಾನಿಕವಾಗಿ ಪ್ರಾಶ್ಚಾತ್ಯ ಪ್ರಭಾವಕ್ಕೆ ತನ್ನನ್ನು ತೆರೆದುಕೊಂಡಿತು. ಶಿಕ್ಷಣದೊಟ್ಟಿಗೆ ಜನರಲ್ಲಿ ಹೊಸ ಚಿಕಿತ್ಸಕ ದೃಷ್ಟಿ ಹುಟ್ಟಿಕೊಂಡಿತು. ಇದರ ಪರಿಣಾಮವಾಗಿ ಅನೇಕ ಶತಮಾನಗಳಿಂದ ಪರಂಪರಾಗತವಾಗಿ ಬಂದು ಸ್ಥಾಯಿಯಾಗಿ ಉಳಿದ ಪ್ರಶ್ನಾತೀತವಾದ ಸನಾತನ ಸ್ತ್ರೀ ಮೌಲ್ಯಗಳನ್ನು ನಿಷ್ಕರ್ಷಕ್ಕೆ ಒಡ್ಡಲಾಯಿತು. ಸತೀಪದ್ಧತಿ, ಬಾಲ್ಯವಿವಾಹ, ವಿಧವಾ ಕೇಶಮುಂಡನ, ಬಹುಪತ್ನಿತ್ವ ಮುಂತಾದ ಅಮಾನವೀಯ ಆಚರಣೆಗಳು ಉದಾರವಾದಿಗಳ ಗಮನ ಸೆಳೆದವು. ಈ ಸಮಸ್ಯೆಗಳು ಸಾಹಿತ್ಯದಲ್ಲಿ ಚರ್ಚಿತವಾದವು. ಅದರಲ್ಲಿಯೂ ಕನ್ನಡದ ಸ್ವತಂತ್ರ ನಾಟಕಗಳು ಸ್ತ್ರೀ ಸಂಬಂಧೀ ಸಮಸ್ಯೆಯನ್ನು ಕೇಂದ್ರವಾಗಿಟ್ಟುಕೊಂಡೇ ರಚಿತಗೊಂಡದ್ದು ವಿಶೇಷವೆನ್ನಬಹುದು.

ಕನ್ನಡಕ್ಕೆ ಹೊಸ ಬಗೆಯ ನಾಟಕಗಳನ್ನು ಕೊಟ್ಟವರು ಟಿ.ಪಿ.ಕೈಲಾಸಂ ಅವರು. ಒಂದು ಬದ್ಧ ಚೌಕಟ್ಟನ್ನು, ನಿಯಮವನ್ನು ಉಲ್ಲಂಘಿಸಿ ರಂಗಭೂಮಿಗೆ

ಹೊಸ ದಿಕ್ಕು ನೀಡಿದವರು. ತಮ್ಮ ನಾಟಕಗಳಲ್ಲಿ ಆಗಿನ ಕಾಲದ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಧಾರ್ಮಿಕ ಸಮಸ್ಯೆಗಳನ್ನು ಎತ್ತಿಕೊಂಡಿದ್ದಾರೆ. ಅವರು ಅಂದಿನ ಸಮಾಜದ ಪಿಡುಗಾಗಿದ್ದ ಬಾಲ್ಯವಿವಾಹ, ವರದಕ್ಷಿಣೆ, ವಿಧವಾ ಸಮಸ್ಯೆ, ವೇಶ್ಯೆಯರ ಸ್ಥಿತಿಗತಿ, ಸ್ತ್ರೀ ಸ್ವಾತಂತ್ರ್ಯದ ಅರಿವಿನ ಗೊಂದಲ, ಬ್ರಾಹ್ಮಣಿಕೆಯ ಹಲವು ಕ್ರಮ ಮುಖವಾಡಗಳು, ನಮ್ಮ ಶಿಕ್ಷಣ ಪದ್ಧತಿಯಲ್ಲಿಯ ವಿಲಕ್ಷಣ ರೀತಿ–ನೀತಿ ಮುಂತಾದವುಗಳ ಮೇಲೆ ಬೆಳಕು ಚೆಲ್ಲಿದ್ದಾರೆ.

ಕನ್ನಡ ನಾಟಕಗಳಲ್ಲಿ ಮೊಟ್ಟಮೊದಲು ವಾಸ್ತವವಾದೀ ನೆಲೆಯಲ್ಲಿ ಸ್ತ್ರೀ ಪಾತ್ರಗಳನ್ನು ಸೃಷ್ಟಿಸಿದ ಶ್ರೇಯಸ್ಸು ಕೈಲಾಸಂ ಅವರಿಗೆ ಸಲ್ಲುತ್ತದೆ. ಇವರ ನಾಟಕಗಳಲ್ಲಿ ಬರುವ ಸ್ತ್ರೀಯರು ಆಗ ವೃತ್ತಿ ನಾಟಕಗಳಲ್ಲಿ ಕಾಣಬರುತ್ತಿದ್ದ ಸೀತೆ, ಸಾವಿತ್ರಿ, ದೌಪದಿ, ಶಕುಂತಲೆಯರಂತಲ್ಲ; ನಮ್ಮ ಸಮಾಜದಲ್ಲಿ ಕಂಡುಬರುವ ಅತ್ಯಂತ ಸಾಮಾನ್ಯ ಸ್ತ್ರೀಯರು. ಹೀಗಾಗಿ ಅವರ ಸ್ತ್ರೀ ಪಾತ್ರ ವಾಸ್ತವವೆನಿಸುತ್ತವೆ. ಮಾನವ ಸಹಜ ಸ್ವಭಾವವನ್ನು ರೂಢಿಸಿಕೊಂಡ ಸ್ವಾಭಾವಿಕ ಪಾತ್ರಗಳಿವು. ಕೈಲಾಸಂ ಅವರ ಸ್ತ್ರೀ ಪಾತ್ರಗಳಲ್ಲಿ ವೈವಿಧ್ಯತೆ ಇದೆ. ಅದರಲ್ಲಿ ಹಲವು ವಿಭಿನ್ನ ಮನೋಭಾವಗಳ ಸ್ತ್ರೀ ಚಿತ್ರಣ ಕಂಡುಬರುತ್ತದೆ.

ವಿಧವೆಯನ್ನು ರಂಗಭೂಮಿಯ ಮೇಲೆ ತರುವುದು ಅಮಂಗಳಕರ ಎಂಬ ಭಾವನೆ ಆ ಕಾಲಕ್ಕೆ ಪ್ರಬಲವಾಗಿತ್ತು. ಅಂಥದರಲ್ಲಿ ವಿಧವೆಯೂ ಮನುಷ್ಯಳು ಅವಳಿಗೂ ಮನಸ್ಸಿದೆ, ಭಾವನೆಗಳಿವೆ, ಹಲವು ತುಮುಲಗಳಿವೆ ಎಂಬುದನ್ನು ಎತ್ತಿ ತೋರಲು ಆ ಪಾತ್ರವನ್ನೇ ಅವರು ರಂಗಭೂಮಿಯ ಮೇಲೆ ನಿಲ್ಲಿಸಿದರು. ಇದರಿಂದ ನಾಟಕಗಳಲ್ಲಿ ವಿಧವಾ ಸಮಸ್ಯೆ ಮೊಟ್ಟಮೊದಲು ಕೈಲಾಸಂ ಅವರ 'ನಾಗಮ್ಮ' ಪಾತ್ರದ ಮೂಲಕವೇ ಅನಾವರಣಗೊಂಡಿತು ಎಂದು ಹೇಳಲಾಗುತ್ತದೆ. ವಾಸ್ತವವಾಗಿ 1887 ರಲ್ಲಿ ವೆಂಕಟರಮಣ ಶಾಸ್ತ್ರೀ ಸೂರಿಯವರು ತಮ್ಮ 'ಇಗ್ಗಪ್ಪ ಹೆಗಡೇ ವಿವಾಹ ಪ್ರಹಸನ'ದಲ್ಲಿ ವಿಧವೆಯನ್ನು ಪಾತ್ರವಾಗಿಸಿ ಆಗಿತ್ತು. ಐತಿಹಾಸಿಕವಾಗಿ ಈ ಶ್ರೇಯಸ್ಸು ಸೂರಿಯವರಿಗೆ ಸಲ್ಲಬೇಕು ನಿಜ. ಆದರೆ ಬಾಹುಳ್ಯ, ವೈವಿಧ್ಯ ಹಾಗೂ ರಂಗಭೂಮಿಯ ಮೇಲೆ ನಾಟಕ ಪ್ರದರ್ಶಿತವಾದ ಹಿನ್ನೆಲೆಯಲ್ಲಿ "ಕೆಂಪು ಸೀರೆಯಮಂಗಲವ ಮೊತ್ತ ಮೊದಲು ರಂಗಭೂಮಿಯಲ್ಲಿ ತಂದ ಮಂಗಳತೆಯು ನಿನ್ನ ಕಾಣಿಕೆ" ಎಂದು ವಿ.ಕೃ.ಗೋಕಾಕ್ ಅವರು ಕೈಲಾಸಂ ಅವರ ಹೆಗ್ಗಳಿಕೆಯನ್ನು ಕೊಂಡಾಡಿದ್ದನ್ನು ಸ್ಮರಿಸಬಹುದು.

ಕೈಲಾಸಂ ನಾಟಕಗಳಲ್ಲಿ ಎದ್ದು ಕಾಣುವ ಪಾತ್ರ ವಿಧವೆಯರದು. ಬ್ರಾಹ್ಮಣ ಸಮಾಜದಲ್ಲಿ ಸಂಪ್ರದಾಯದ ಹಿಡಿತಕ್ಕೆ ಸಿಕ್ಕು ಕೇಶಮುಂಡನ ಮಾಡಿಸಿಕೊಂಡು ಕೆಂಪು ಸೀರೆ ಸುತ್ತಿಕೊಂಡು ಸದಾ ಪರರ ಸೇವೆಯಲ್ಲಿಯೇ ನಿರತಳಾಗಬೇಕಾದ ಹೆಣ್ಣಿನ ಚಿತ್ರ ಇವರ ನಾಟಕಗಳಲ್ಲಿ ಹೃದಯಂಗಮವಾಗಿ ಮೂಡಿಬಂದಿದೆ. ವೈಧವ್ಯದ ಆಚರಣೆಯ ರೀತಿ ನೀತಿಗಳನ್ನು ಕೈಲಾಸಂ ಒಪ್ಪುವುದಿಲ್ಲ. ಬೆಂಕಿ ಇಡಬೇಕು ಸಂಪ್ರದಾಯಗಳಿಗೆಲ್ಲ ಎಂದು ಸ್ಪಷ್ಟವಾಗಿಯೇ ವಿರೋಧಿಸಿದ್ದಾರೆ. 'ಮಾತೃದೇವೋಭವ' ಎಂಬುದನ್ನು ಕೈಲಾಸಂ ಮನಸಾರೆ ಒಪ್ಪಿದವರು. ವಾತ್ಸಲ್ಯನಿಧಿ, ಕರುಣಾಮೂರ್ತಿಯಾದ ತಾಯಿಯ ಮಮತೆ, ತ್ಯಾಗ, ಆದರ್ಶಗಳನ್ನು ಕೈಲಾಸಂ ತಮ್ಮ ನಾಟಕಗಳಲ್ಲಿ ಭಾವದುಂಬಿ ಚಿತ್ರಿಸಿದ್ದಾರೆ. ಇಂಥ ತಾಯಿಯರ ವಾತ್ಸಲ್ಯ ಅಪೂರ್ವವಾದುದು. ಒಳ್ಳೆಯ ಸಂಸ್ಕಾರವನ್ನು ನೀಡಿದ ತಾಯಂದಿರು, ನೆರೆಹೊರೆಯವರಿಗೆ ಉಪಕಾರಿಗಳಾಗಿರಬೇಕೆಂಬುದನ್ನು ಕಲಿಸಿದವರು, ತ್ಯಾಗಮಯಿಯಾದವರು, ಮುಗ್ಧತೆ, ಪ್ರೇಮ ಸಾಕಾರಗೊಂಡ ತಾಯಂದಿರು, ಮಗುವನ್ನು ಹೆರದೆಯೂ ಬೇರೊಬ್ಬರ ಮಕ್ಕಳನ್ನು ತಮ್ಮ ಮಕ್ಕಳಂತೆ ಸಾಕಿ ಸಲಹಿದ ತಾಯಂದಿರು, ತಾಯ್ತನದ ಹಂಬಲದೊಂದಿಗೇ ಮಲಮಕ್ಕಳನ್ನು ತಮ್ಮ ಹೊಟ್ಟೆ ಮಕ್ಕಳಂತೆ ಕಾಪಾಡಿದ ತಾಯಂದಿರು ಕೈಲಾಸಂ ಅವರ ನಾಟಕಗಳಲ್ಲಿ ಚಿತ್ರಿತರಾಗಿದ್ದಾರೆ.

ಮಗುವಿಗೆ ಮೊದಲ ಶಿಕ್ಷಣವೆಂದರೆ ತಾಯಿ ನೀಡುವ ಸದಾಚಾರ, ಸದ್ವರ್ತನೆಗಳ ಪಾಠ. ಇದು ಅವಳ ಪ್ರಥಮ ಕರ್ತವ್ಯ. ತಾಯಿ ತನ್ನ ಮಕ್ಕಳಿಗೆ ಇಂಥ ಶಿಕ್ಷಣ ಕೊಡುವ ಮೂಲಕ ಸಮಾಜಕ್ಕೆ, ದೇಶಕ್ಕೆ ಉಪಕಾರ ಮಾಡಿದರೆ ಅವಳ ಬದುಕು ಸಾರ್ಥಕ ಎನ್ನುವುದು ಕೈಲಾಸಂ ಅವರ ಅಭಿಮತ. ಗಂಡು ಮಕ್ಕಳನ್ನು ಲೋಕೋಪಕಾರಿಯಾಗಿ ಬೆಳೆಸಿದಂತೆ ಹೆಣ್ಣು ಮಕ್ಕಳನ್ನು ಕೊಟ್ಟ ಮನೆಯಲ್ಲಿ ಅನ್ಯೋನ್ಯವಾಗಿ ಬಾಳಿ ತವರಿಗೆ ಹೆಸರು ತರುವಂತೆ ಬೆಳೆಸಬೇಕೆನ್ನುವುದು ಅವರ ಅಭಿಪ್ರಾಯವಾಗಿತ್ತು. ಟೊಳ್ಳುಗಟ್ಟಿ ನಾಟಕದ ಭಾಗೀರಥಮ್ಮ, ಅಮ್ಮಾವ್ರ ಗಂಡ ನಾಟಕದ ಕಮಲ, ಸಾತೂತೌರ್ಮನೆ ನಾಟಕದ ನರಸಮ್ಮ ಇವರೆಲ್ಲ ಈ ಶರೀರ ಪರೋಪಕಾರಕ್ಕಾಗಿ ಎಂಬುದನ್ನು ನಂಬಿ ತಮ್ಮ ಮಕ್ಕಳಲ್ಲೂ ಈ ಧೋರಣೆ ಭಿತ್ತಿದವರು. ತಮಗೆ ತಾಯ್ತನದ ಅವಕಾಶವಿಲ್ಲದಿದ್ದರೂ ಅನ್ಯರ ಮಕ್ಕಳನ್ನು ತಮ್ಮ ಹೊಟ್ಟೆಯ ಮಕ್ಕಳಂತೆ ಸಾಕಿ ಅವರನ್ನು ಸುಸಂಸ್ಕೃತರನ್ನಾಗಿ ಬೆಳೆಸಿದ ತಾಯಂದಿರೂ ಇದ್ದಾರೆ. ಟೊಳ್ಳುಗಟ್ಟಿ ನಾಟಕದ

ನಾಗಮ್ಮ, ಹುತ್ತದಲ್ಲಿ ಹುತ್ತ ನಾಟಕದ ಸುಬ್ಬಮ್ಮ, ಹೋಂರೂಲ್ ನಾಟಕದ ವೆಂಕಮ್ಮ ಮುಂತಾದವರನ್ನು ಇಲ್ಲಿ ಸ್ಮರಿಸಬಹುದು. 'ಹೆಂಗ್ಸಿಗೇನು? ಮನೆ ಮಾವಳ್ಳಿಲ್ತಾನೇ ಆಗ್ಲಿ–ಮಲ್ಲೇಶ್ವರಲ್ತಾನೆ ಆಗ್ಲಿ ಮನೆ ತುಂಬಾ ಮಕ್ಕಳನ್ನಾಡುಸ್ಕುಂಡು ಸಂತೋಷಪಡೋದಲ್ದೆ ಅಳುಳ್ಟುಟ್ಟಿದ್ದಕ್ಸಾರ್ಥ' ಎನ್ನುವ ವೆಂಕಮ್ಮನ ಮಾತಿನಲ್ಲಿ ಹೆಣ್ಣಿನ ಬದುಕಿನ ಸಾರ್ಥಕತೆ ತಾಯ್ತನದಲ್ಲಿ ಎಂಬುದು ವ್ಯಕ್ತವಾಗಿದೆ. ಇಂಥ ಮನೋಭಾವವನ್ನು ಕೈಲಾಸಂ ಚಿತ್ರಿಸಿದ ಎಲ್ಲಾ ತಾಯಿ ಪಾತ್ರಗಳಲ್ಲೂ ಸ್ಪಷ್ಟವಾಗಿ ಕಾಣಬಹುದು.

"ಸೂಳೆಗಾರಿಕೆಯ ಮೂಲ ಮನುಷ್ಯ ಸ್ವಭಾವದಲ್ಲಿಯೇ ಇರುವಾಗ ಅದರಲ್ಲಿಯ ದುರಂತವೆ ಅನಿವಾರ್ಯವಾದದ್ದು ಎಂಬ ವಿಚಾರ ದೃಷ್ಟಿ 'ಸೂಳೆ' ನಾಟಕದ ಕೇಂದ್ರದಲ್ಲಿದೆ. ಇದರಲ್ಲಿ ಬರುವ ಸಂಘರ್ಷ ಶಾಬ್ಧಿಕವಾದುದು. ದುರಂತವೂ ಶಾಬ್ಧಿಕವಾದುದು" ಎಂದು ಡಾ. ಶಾಂತಿನಾಥ ದೇಸಾಯಿ ವಿಶ್ಲೇಷಿಸಿದ್ದಾರೆ. ವೇಶ್ಯಾ ಸಮಸ್ಯೆಯನ್ನು ಅನೇಕ ಲೇಖಕರು ಎತ್ತಿಕೊಂಡು ತಮ್ಮ ತಮ್ಮ ದೃಷ್ಟಿಕೋನದಿಂದ ವಿಶ್ಲೇಷಿಸಿದ್ದಾರೆ. ಬರ್ನಾರ್ಡ್ ಶಾ ಎಂಬ ಐರಿಶ್ ನಾಟಕಕಾರ ಒಂದು ನಾಟಕದಲ್ಲಿ ಸ್ತ್ರೀಯರನ್ನು ಅತಿಯಾಗಿ ದುಡಿಸಿ ಕಡಿಮೆ ಸಂಬಳ ಕೊಡುವುದರಿಂದ ಅವರು ವೇಶ್ಯಾ ವೃತ್ತಿಗಿಳಿಯುತ್ತಾರೆ ಎಂದಿದ್ದಾರೆ. ಆದರೆ ಕೈಲಾಸಂ ಅವರ ದೃಷ್ಟಿಕೋನ ಬೇರೆ. ಕಾಮದ ವಿಷಯದಲ್ಲಿ ಪಶುಪಕ್ಷಿಗಳಿಗಿರುವ ಸಂಯಮ ಮನುಷ್ಯನಿಗಿಲ್ಲ. ಅವನ ಈ ರಾಕ್ಷಸೀ ಪ್ರವೃತ್ತಿಗೆ ಮದುವೆಯಾದ ಹೆಂಡಿರು, ಮದುವೆಯಾಗದ ಸೂಳೆಯರೂ ಬಲಿಯಾಗಿದ್ದಾರೆ. "ಮಾರ್ಕಿಸ್ಟ್ ಸಿದ್ಧಾಂತ ನಂಬಿದ ಶಾ ಸೂಳೆಗಾರಿಕೆಗೆ ಆರ್ಥಿಕ ಕಾರಣಗಳನ್ನು 'ಕಾಮ ಅರಿಷಡ್ವರ್ಗಗಳಲ್ಲಿ ಒಂದು' ಎಂದು ನಂಬಿದ ನಮ್ಮ ಸಿದ್ಧಾಂತದ ಪ್ರಕಾರ ಅದಕ್ಕೆ ಬಲಿಯಾದ ಗಂಡಸಿನಿಂದ ಈ ಅನಾಹುತ ಎಂದು ಕೈಲಾಸಂ ವಿವರಿಸಿದ್ದೂ ಸಹಜವಾಗಿದೆ" ಎಂಬುದು ಡಿ.ವಿ.ಪೋತದಾರ ಅವರ ಅಭಿಪ್ರಾಯ. ಕಾಮ ಮನುಷ್ಯನ ಒಂದು ಮೂಲ ಪ್ರವೃತ್ತಿ. ಅದರ ವಿಕೃತಿಯಲ್ಲಿ ಸೂಳೆಗಾರಿಕೆಯ ವ್ಯವಸ್ಥೆ ರೂಪುಗೊಂಡಿದೆ. ಇದರ ನಿರ್ಮೂಲನೆಗೆ ಒಟ್ಟೂ ಸಮಾಜೋ ಆರ್ಥಿಕ ನೆಲೆಯ ಪರಿಹಾರ ಅಗತ್ಯವಾಗಿದೆ.

ಹೆಣ್ಣಿನ ತ್ಯಾಗ ಗುಣವನ್ನು, ತಾಯ್ತನವನ್ನು ವೈಭವೀಕರಿಸಿ ಅವರ ಎಳೆ ಎಳೆಯನ್ನು ಬಿಡಿಸಿ ತೋರಿಸುವ ಕೈಲಾಸಂ ಮೂಲತಃ ಸಂಪ್ರದಾಯವಾದಿ. ನಾಗತ್ತೆ, ಸರಸೂ, ಸೂಳೆಯಂತಹವರ ಶೋಷಣೆಯನ್ನು ಅಂತಃಕರಣ ಮಿಡಿಯುವಂತೆ

ಚಿತ್ರಿಸಿದ್ದಾರೆ. ಲೇಡಿ ಶಿವದಾಸ ಅಯ್ಯರ್, ಭಾಗೀರಥಮ್ಮ, ಲಕ್ಷಮ್ಮನಂಥವರ ತಾಯ್ತನವನ್ನು ಕೊಂಡಾಡಿದ್ದಾರೆ. "ಕೈಲಾಸಂ ಅವರು ತಾಯಿಯೇ ದೇವರು– ದೇವರು ತಪ್ಪು ಮಾಡುವುದಿಲ್ಲ ಆದ್ದರಿಂದ ತಾಯಿ ತಪ್ಪು ಮಾಡುವುದಿಲ್ಲ" ಎಂಬ ತರ್ಕಸರಣಿಯನ್ನು ಅನುಸರಿಸಿದ್ದಾರೆ.

ಒಟ್ಟಾಗಿ ನೋಡುವಾಗ ಕೈಲಾಸಂ ಸ್ತ್ರೀ ಚಿತ್ರಣಗಳು ಸಾಂಪ್ರದಾಯಿಕ ಬದುಕಿನಿಂದ ಸಿಡಿದೇನು ಹೋಗುವುದಿಲ್ಲ. 'ಸಂಸ್ಕೃತಿಯಿಂದ ಬಂದ ಸಂಸ್ಕಾರ' ಎಂಬ ಶ್ರದ್ಧೆ ಕೈಲಾಸಂ ಅವರದು. ಆದ್ದರಿಂದ ಸಂಸ್ಕಾರ ಬಲದಿಂದ ತೋರುವ ವರ್ತನೆಗಳೇ ಅವರ ನಾಟಕಗಳಿಗೆ ಮೆಚ್ಚುಗೆ, ಗೌರವಗಳಿಂದ ಚಿತ್ರಿತವಾಗುತ್ತವೆ. ಹೆಣ್ಣಿನಿಂದ ಸಾಂಪ್ರದಾಯಿಕ ಸಮಾಜ ನಿರೀಕ್ಷಿಸುವ ಅತಿ ಉದಾರವಾದ ವರ್ತನೆಗಳನ್ನು ಕೈಲಾಸಂ ಅವರು ತಮ್ಮ ಪಾತ್ರಗಳ ಮೂಲಕ 'ಸ್ತ್ರೀಯರ ನಿಜವಾದ ಪಾತ್ರ' ಎನ್ನುವ ಅರ್ಥದಲ್ಲಿ ಬಿಂಬಿಸುತ್ತಾರೆ. 'ಸ್ತ್ರೀಯರು ಹೀಗಿರಬೇಕು' ಎಂದು ನಿರ್ಧರಿಸುವ ಪುರುಷ ಕೇಂದ್ರಿತ ವ್ಯವಸ್ಥೆಯ ಹಿತಾಸಕ್ತಿಗಳನ್ನು ಈ ಸ್ತ್ರೀಯರು ನಂಬಿ ಆಚರಿಸಿ ಜೀವಂತವಾಗಿ ಉಳಿಸಿ ರಕ್ಷಿಸುವರು.

ಮುಖ್ಯವಾಗಿ ಕೈಲಾಸಂ ಒಬ್ಬ ಮಾನವತಾವಾದಿ. ಅವರು ಉನ್ನತ ಆದರ್ಶಗಳನ್ನು ನಂಬಿದವರು. ಈ ಆದರ್ಶಗಳೆಲ್ಲ ಸಾಮಾನ್ಯವಾಗಿ ಅಮೂರ್ತವಾಗಿರುವುದರಿಂದ ತಮ್ಮ ನಾಟಕಗಳಲ್ಲಿ ನೀಡುವ ಪರಿಹಾರ ವಾಸ್ತವ ಬದುಕಿಗೆ ಸೂಕ್ತವಾಗದೆ ಹೋಗುತ್ತದೆ. ತಮ್ಮ ಎಲ್ಲಾ ಇತಿಮಿತಿಗಳ ನಡುವೆಯೂ ಕೈಲಾಸಂ ಅವರು ಸ್ತ್ರೀಯರಿಗೆ ವಾಸ್ತವವಾಗಿ ನಾಟಕಗಳಲ್ಲಿ ಪ್ರವೇಶ ನೀಡಿದ್ದು, ವೈವಿಧ್ಯಮಯ ಸ್ತ್ರೀಯರನ್ನು ಚಿತ್ರಿಸಿದ್ದು, ವರ್ಣಮಯ ಸ್ತ್ರೀ ಪ್ರಪಂಚದ ಚಿತ್ತಾರವನ್ನು ಬರೆದದ್ದು ಕನ್ನಡ ನಾಟಕ ಇತಿಹಾಸದಲ್ಲಿ ಮುಖ್ಯ ಮೈಲಿಗಲ್ಲಾಗಿದೆ. ಅದಕ್ಕೆ 'ಕನ್ನಡಕ್ಕೊಬ್ಬನೇ ಕೈ' ಎಂದು ಹೇಳಲಾಗುತ್ತದೆ.

**ಪರಾಮರ್ಶನ ಗ್ರಂಥಗಳು:**

1. ಅಶೋಕ ಟಿ. ಪಿ. (ಸಂ), 1994, ಶ್ರೀರಂಗ, ಸಂಪುಟ–1, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
2. ಕೃಷ್ಣರಾಯ ಅ. ನ., 1971, ಕೈಲಾಸಂ, ಪುಸ್ತಕಾಲಯ ಪ್ರಕಾಶಕರು, ಮೈಸೂರು.
3. ತಿಪ್ಪೇರುದ್ರಸ್ವಾಮಿ (ಸಂ), 1987, ಕೈಲಾಸಂ ಕೃತಿಗಳು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ.
4. ವಿನಾಯಕ, 1987, ಬಾಳಿದೇಗುಲದಲ್ಲಿ, ಮನೋಹರ ಗ್ರಂಥ ಪ್ರಕಾಶನ ಸಮಿತಿ, ಧಾರವಾಡ.